ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 38-44
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜೋಗಿಯವರ ಸಾಹಿತ್ಯದಲ್ಲಿ ಮನೋವೈಜ್ಞಾನಿಕತೆ

**ಗೀತಾ ಎಸ್[1] ಮತ್ತು ಡಾ. ಬಿ.ಸಿ. ನಾಗೇಂದ್ರಕುಮಾರ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು

**Abstract:**
*ಇಂದು ಮಾನವನ ಜೀವನದಲ್ಲಿ ಮನೋವೈಜ್ಞಾನಿಕತೆಯ ಜ್ಞಾನ ತುಂಬಾ ಪ್ರಮುಖ ಪಾತ್ರವಹಿಸುತ್ತದೆ. ಮಾನವನ ಹುಟ್ಟಿನಿಂದ ಸಾಯುವವರೆಗೆ ಮನಸ್ಸಿನಲ್ಲಿ ನಡೆಯುವ ವರ್ತನೆ, ಆಲೋಚನೆಗಳು ಸಮಾಜದ ಮೇಲೆಯೂ ಗಾಢವಾದ ಪರಿಣಾಮವನ್ನು ಬೀರುತ್ತದೆ. (ಇದರಲ್ಲಿ ವೈಜ್ಞಾನಿಕತೆಯನ್ನು ಒಳಗೊಂಡಂತೆ ವೈಜ್ಞಾನಿಕ ಮನೋಭಾವ) ಮನೋವೈಜ್ಞಾನಿಕ ಮನಸ್ಸು ವ್ಯಕ್ತಿಯ ಸ್ವಯಂಪರೀಕ್ಷೆ, ಆತ್ಮಾವಲೋಕನ ಹಾಗು ವೈಯಕ್ತಿಕ ಒಳನೋಟದ ಸಾಮರ್ಥ್ಯವನ್ನು ಸೂಚಿಸುತ್ತದೆ. ಬಹಿರಂಗಪದಗಳು ಮತ್ತು ಕ್ರಿಯೆಗಳ ಆಧಾರವಾಗಿರುವ ಅರ್ಥಗಳನ್ನು ಗುರುತಿಸುವ ಸಾಮರ್ಥ್ಯ, ಭಾವನಾತ್ಮಕ ಸೂಕ್ಷ್ಮತೆ ಮತ್ತು ಸಂಕೀರ್ಣತೆಯನ್ನು ಮೆಚ್ಚುವ ಸಾಮರ್ಥ್ಯ, ಭೂತ ಮತ್ತು ವರ್ತಮಾನದ ನಡುವಿನ ಸಂಪರ್ಕಗಳನ್ನು ಗುರುತಿಸುವ ಸಾಮರ್ಥ್ಯ ಮತ್ತು ಒಬ್ಬರ ಸ್ವಂತ ಮತ್ತು ಇತರರ ಉದ್ದೇಶಗಳು ಮತ್ತು ಉದ್ದೇಶಗಳ ಒಳನೋಟವನ್ನು ಒಳಗೊಂಡಿದೆ. ಮಾನಸಿಕ ಮನಸ್ಸಿನ ಜನರು ಮಾನಸಿಕ ಜೀವನದ ಬಗ್ಗೆ ಸರಾಸರಿಗಿಂತ ಹೆಚ್ಚಿನ ಒಳನೋಟವನ್ನು ಹೊಂದಿರುತ್ತಾರೆ. ಅದೇ ರೀತಿ ನಮ್ಮ ಅಧ್ಯಯನವು ವೈಜ್ಞಾನಿಕವಾಗಿರಬೇಕು. ಅದರಿಂದ ಸತ್ಯವನ್ನು ತಿಳಿಯಬಹುದು. ಇಲ್ಲದಿದ್ದರೆ ಕೇವಲ ಖಾಸಗಿ ಭಾವಲೋಕದಲ್ಲಿ ಅಥವಾ ಭ್ರಮಾತ್ಮವಕವಾದ ಲೋಕದಲ್ಲಿ ವ್ಯವಹರಿಸಬೇಕಾಗುತ್ತದೆ. ಸೃಜನಬರಹಗಳು ಇಂತಹ ಆಕಸ್ಮಿಕಗಳನ್ನು ಸೃಷ್ಠಿಸಿದರೂ ಮತ್ತೆ ಸತ್ಯದ ಹುಡುಕಾಟಕ್ಕೆ ಬುದ್ಧಿಯನ್ನು ಚುರುಕುಗೊಳಿಸುವ ಕಾರ್ಯವು ಕಥೆ, ಕವಿತೆ, ಕಾದಂಬರಿ, ಅಂಕಣಗಳಿರುವ ಶಕ್ತಿಯಾಗಿದ್ದು, ಈ ಕಾರಣದಿಂದ ಸೃಜನಬರಹಗಳು ಇಂದು ವೈಜ್ಞಾನಿಕತೆ, ಮನೋವೈಜ್ಞಾನಿಕ ವಿಚಾರಗಳ ಮೊರೆಹೋಗುತ್ತಿದೆ. ಸಾಹಿತ್ಯ ರಚನೆಯಲ್ಲೂ ಮನೋವೈಜ್ಞಾನಿಕ ಹಾಗೂ ವೈಜ್ಞಾನಿಕತೆಯನ್ನು ಗಮನಿಸಬಹುದಾಗಿದ್ದು, ಜನಸಾಮಾನ್ಯರಿಗಾಗಿ ಸರಳಭಾಷೆಯನ್ನು ಬಳಸುವುದು ಹಾಗೂ ಬೌದ್ಧಿಕತೆಯನ್ನು ದರ್ಶನ ಮಾಡುವುದು. ಇಂತಹ ಅಗತ್ಯ ವಿಚಾರಗಳೊಂದಿಗೆ ಸಂಶೋಧನೆ ಇಲ್ಲವೆ ಲೇಖನಗೊಳಿಸುವುದು ಮುಖ್ಯವಾಗುತ್ತದೆ ಎಂಬುದನ್ನು ಅರಿಯುವುದು.*

**Keywords:** *ಕನ್ನಡ ಸಾಹಿತ್ಯ, ಮನಸ್ಸು, ವಿಜ್ಞಾನ, ಮನೋವಿಜ್ಞಾನ, ವೈಜ್ಞಾನಿಕ ಚಿಂತನೆ.*

## ಪೀಠಿಕೆ

ಮನೋವೈಜ್ಞಾನಿಕ ಸಾಹಿತ್ಯವೆಂದರೆ ಮನಸ್ಸಿನ ದರ್ಶನ. ಎಲ್ಲಾ ಅಧ್ಯಯನಗಳ ಮೂಲ ಉದ್ದೇಶ ಫಲಿತವಾಗಿದೆ. ಅದು ಮನೋವೈಜ್ಞಾನಿಕ ಹಾಗೂ ವೈಜ್ಞಾನಿಕ ಚಿಂತನೆಯೇ ಇರುತ್ತದೆ. ಮನಸ್ಸಿನಲ್ಲಿ

**Please cite this article as:** ಗೀತಾ, ಎಸ್ ಮತ್ತು ಬಿ.ಸಿ. ನಾಗೇಂದ್ರಕುಮಾರ್. (2025). ಜೋಗಿಯವರ ಸಾಹಿತ್ಯದಲ್ಲಿ ಮನೋವೈಜ್ಞಾನಿಕತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 38–44

ಅವಿತಿರುವ ಸತ್ಯವನ್ನು ಯಾವ ಪ್ರಯೋಗಾಲಯಗಳಲ್ಲಿಯೂ ತೀರ್ಮಾನಿಸಿ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಮನೋವಿಜ್ಞಾನದ ಮೂಲಕ ಇದನ್ನು ಬಹುತೇಕ ಸಾಧಿಸಬಹುದು. ಅದರಲ್ಲಿಯೂ ಸಾಹಿತ್ಯ ಮತ್ತು ಮನೋವಿಜ್ಞಾನದಂತಹ ಜ್ಞಾನಶಾಖೆಗಳು ಅಥವಾ ಕಲೆ ಮತ್ತು ವಿಜ್ಞಾನ ಸೇರಿದರೆ ಇನ್ನೂ ಖಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಎರಡು ವಿಚಾರಗಳು ಕಾಣಿಸುತ್ತದೆ. ಮನೋವೈಜ್ಞಾನಿಕತೆ ಹಾಗೂ ಸಾಹಿತ್ಯದಲ್ಲಿನ ವೈಜ್ಞಾನಿಕತೆ, ಮನೋವೈಜ್ಞಾನಿಕತೆಯು ಅತ್ಯಂತ ಶಿಸ್ತು ರಚನೆಯ ಬೌದ್ಧಿಕ ಅನ್ವೇಷಣೆಯಾದರೆ, ಸಾಹಿತ್ಯ ವೈಜ್ಞಾನಿಕತೆಯು ಅದನ್ನು ಸಾಂಗತ್ಯಗೊಳಿಸಬಹುದು. ಆದರೆ ಮನೋವೈಜ್ಞಾನಿಕತೆ ಎಂಬುದು ತುಂಬಾ ವಿಭಿನ್ನವಾಗಿದ್ದು, ಯಾವ ಕ್ಷಣದಲ್ಲಾದರೂ ಬದಲಾವಣೆ, ಚಿಂತನೆ, ವ್ಯಕ್ತಿತ್ವ, ಸ್ವಭಾವ ಬದಲಾಗಬಹುದಾಗಿರುತ್ತದೆ. ಮನೋವಿಜ್ಞಾನ ಸಾಹಿತ್ಯವನ್ನು ಹೇಗೆ ಗುರುತಿಸುವುದು ಹಾಗೂ ರಚಿಸುವುದು, ಇಂತಹವರು ಮನೋವಿಜ್ಞಾನಿಗಳೇ ಆಗಿರಬೇಕೆ, ಸಾಹಿತ್ಯ ಅಧ್ಯಯನಕಾರರಿಗೆ ಸಾಧ್ಯವಿಲ್ಲವೆ? ಎಂಬ ಪ್ರಶ್ನೆಗಳನ್ನು ಇಲ್ಲಿ ದಾಖಲಿಸಬಹುದು.

ಜೋಗಿ (ಗಿರೀಶ್‌ರಾವ್ ಹತ್ವಾರ್)ರವರು ಮನೋವೈಜ್ಞಾನಿಕ ಸಾಹಿತ್ಯ ಕುರಿತು 'ಚಿಕ್ಕಪ್ಪ' ಕಾದಂಬರಿಯಲ್ಲಿ ತಮ್ಮ ಆಶಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ, "ಒಂದೂರನ್ನು ಕಲುಷಿತಗೊಳಿಸಲು ವಿಚಾರಗಳೂ ವಾದಗಳೂ ಸಾಕು, ಯಾವ ವಿಷಾನಿಲಗಳೂ ಬೇಕಿಲ್ಲ. ವಿಷಾನಿಲದ ಪ್ರಭಾವ ಹತ್ತೋ ಇಪ್ಪತ್ತೋ ವರುಷ ಇದ್ದೀತು. ಆದರೆ ಮಕ್ಕಳ ಮನಸ್ಸಿನಲ್ಲಿ ತುಂಬುವ ವಿಚಾರಧಾರೆ ತಲೆಮಾರುಗಳ ತನಕ ಜೀವಂತವಾಗಿರುತ್ತದೆ. ಒಮ್ಮೊಮ್ಮೆ ಅದು ಒಂದು ಜನಾಂಗವನ್ನೇ ಆವರಿಸಿಕೊಂಡುಬಿಡುತ್ತದೆ. ಅದಕ್ಕಿಂತ ಅಪಾಯಕಾರಿ ಮತ್ತೊಂದಿಲ್ಲ ಅನ್ನುವುದಕ್ಕೆ ಚಿಕ್ಕಪ್ಪನೇ ಸಾಕ್ಷಿ ಅನ್ನುತ್ತಾ, ಅವರು ಚಿಕ್ಕಪ್ಪನ ಕತೆಯನ್ನು ಹೇಳುತ್ತಾ ಹೋದರು."[1] ಮುಂದುವರೆದಂತೆ ಮನೋವೈಜ್ಞಾನಿಕತೆ ಸಾಹಿತ್ಯದ ರಚನೆಯ ಕುರಿತು ಸಾಧ್ಯತೆಗಳನ್ನು ಚರ್ಚಿಸಿದ್ದಾರೆ. ಈ ಕಾರಣಕ್ಕೆ ಜೋಗಿಯವರ 'ಚಿಕ್ಕಪ್ಪ' ಕಾದಂಬರಿಯನ್ನು ಮನೋವೈಜ್ಞಾನಿಕತೆಯ ಹಿನ್ನೆಲೆಯಲ್ಲಿ ವಿಮರ್ಶಿಸುವುದು ಹೆಚ್ಚು ಔಚಿತ್ಯವಾಗಿದೆ.

"ಉಸಿರಾಡುವ ಗಾಳಿ, ಬಿಸಿಲಿನ ಹದ ಇದ್ದಕ್ಕಿದ್ದ ಹಾಗೆ ಬದಲಾಗಿ ರೂಪು ಮತ್ತು ರೇಖೆ ಕೂಡ ಹೊಸ ಆಕಾರ ತಳೆದು, ನಾವು ಪ್ರೀತಿಸಿದ ಊರು, ನಾವು ಕೊನೆತನಕ ಪ್ರೀತಿಸಬಹುದು ಅಂದುಕೊಂಡಿದ್ದ ಊರು ಒಲ್ಲದ ಗಂಡನಂತೆ ಅನ್ನಿಸತೊಡಗಿದರೆ, ಅಂಥ ಸ್ಥಿತ್ಯಂತರಕ್ಕೆ ಕಾರಣವಾಗುವುದು ರಾಜಕಾರಣ ಮಾತ್ರನಾ? ಇದ್ದಕ್ಕಿದ್ದ ಹಾಗೆ ದಿಗ್ಗನೆದ್ದು ನಿಲ್ಲುವ ಕುಂಕುಮಾಂಕಿತರು, ಕೊಡಲಿ ಹಿಡಿದವರು, ಬಾವುಟದವರು, ಹಸಿರು ಹೊದ್ದವರು, ವೀರಕೇಸರಿಗಳು, ಆರ್ಭಟಿಸುತ್ತಾರೆ, ನೀರು ಕದಡುತ್ತದೆ, ಗಾಳಿ ಕಲುಷಿತವಾಗುತ್ತದೆ. ಮನಸ್ಸು ಕಳಂಕವಾಗುತ್ತದೆ. ಒಂದೂರನ್ನು ನಾಶಮಾಡುವುದು ವಿಷಾನಿಲವೋ? ವಿಚಾರಧಾರೆಯೋ? ಹೊರಗಿನ ಚಂಡಮಾರುತವೋ? ಒಳಗಿನ ಜ್ವಾಲಾಮುಖಿಯೋ ಧರ್ಮವನ್ನು ಕಾಪಾಡುವುದಕ್ಕೆಂದೇ ಹುಟ್ಟಿಕೊಳ್ಳುವ ಧರ್ಮಾಂಧತೆಯೋ? ಚಿಕ್ಕಪ್ಪ ಪ್ರಶ್ನೆಯೂ ಅಲ್ಲ, ಉತ್ತರವೂ ಅಲ್ಲ, ಉಪ್ಪಿನಂಗಡಿಯ ಒಳಗುದಿ, ಇದು ಕೇವಲ ಉಪ್ಪಿನಂಗಡಿಯ ಕತೆಯಲ್ಲ ದೇಶದ ಬೇಗುದಿ."[2]

ಇದು ಮನೋವೈಜ್ಞಾನಿಕ ಚಿಂತಕರಿಗೆ, ಸಾಹಿತ್ಯವನ್ನು ವೈಚಾರಿಕವಾಗಿ ಚಿಂತಿಸುವವರಿಗೆ ಸೂಕ್ಷ್ಮವಾಗಿ ಗಮನಿಸಿದಾಗ, ನಿರ್ದಿಷ್ಟವಾದ ಸತ್ಯಗಳನ್ನು ಸಮಾಜದ ಒಳನೋಟವನ್ನು ಎಲ್ಲಾ ರೀತಿಯಿಂದಲೂ ನೋಡಿದಾಗ ಸಮಾಜದಲ್ಲಿ ವಾಸಿಸುತ್ತಿರುವ ಮಾನವನ ಮನಸ್ಥಿತಿ ವಿಚರಧಾರೆಗಳು, ವೈಜ್ಞಾನಿಕ ಚಿಂತನೆ, ಎಲ್ಲಾ ಅಂಶಗಳನ್ನು ಸಾಹಿತಿ ಜೋಗಿಯವರು ಗಮನಿಸಿದ್ದಾರೆ ಎಂಬುದು ತಿಳಿಯುತ್ತದೆ.

ಸಮಾಜದಲ್ಲಿ ನಡೆಯುವಂತಹ ಅನ್ವೇಷಣೆಗಳು, ಚಿಕ್ಕಪ್ಪ ಎಂದರೆ ಒಬ್ಬ ವ್ಯಕ್ತಿಯಲ್ಲ, ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಬ್ಬ ಚಿಕ್ಕಪ್ಪ ಎಂಬ ವ್ಯಕ್ತಿ/ಪಾತ್ರ ಅಡಗಿದೆ ಎಂಬುದನ್ನು ತಿಳಿಸಿದ್ದಾರೆ. ಜೋಗಿಯವರು ಕೇವಲ ಸಾಹಿತಿ ಮಾತ್ರವಲ್ಲದೇ ಅವರು ಪತ್ರಕರ್ತರು ಹಾಗೂ ಸಿನಿಮಾ ರಂಗದಲ್ಲೂ ಕಾರ್ಯನಿರ್ವಹಿಸಿತ್ತಿರುವುದರಿಂದ ಜೋಗಿಯವರ ಕೃತಿಗಳಲ್ಲಿ ನೈಜತೆಯನ್ನು ಕಾಣಬಹುದು. ಹಾಗೂ ಇವರು ಗ್ರಾಮ ಪ್ರದೇಶದವಾದ ಗುರುವಾಯನಕೆರೆ ಉಪ್ಪಿನಂಗಡಿಗಳ ಪರಿಸರದಿಂದ ಬಂದು ನಗರದಲ್ಲಿ ನೆಲೆಸಿದ್ದಾರೆ. ಗ್ರಾಮಜೀವನ, ಪರಿಸರ ಮಾನವನ ಮನಸ್ಥಿತಿ, ಮನೋವೈಜ್ಞಾನಿಕ ಚಿಂತನೆ ತುಂಬಾ ಗಾಢವಾಗಿದೆ. ಇವುಗಳನ್ನು ಮೂಲಸೆಳೆಯಾಗಿ ಇರಿಸಿಕೊಂಡು ಸಾಮಾಜಿಕ ಸಂಸ್ಕೃತಿಯನ್ನು ಚಿತ್ರಿಸುವ ಜೋಗಿಯವರ ಕಾದಂಬರಿಗಳಲ್ಲಿ ಮಾನವನ ವರ್ತನೆಗಳ ಸಾಗರವೇ ಇದೆ. ಇವುಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಸಾಕಷ್ಟು ಅವಕಾಶಗಳನ್ನು ಜೋಗಿಯವರು ಒದಗಿಸಿಕೊಟ್ಟಿದ್ದಾರೆ.

ಜೋಗಿಯವರ ಸಾಹಿತ್ಯ ಕೃತಿಗಳಲ್ಲಿ ಮನೋವೈಜ್ಞಾನಿಕತೆ ಎಂಬುದು ಇಂದಿನ ಸಮಾಜಕ್ಕೆ ತಕ್ಕದ್ದಾಗಿದೆ. ಹಾಗೂ ನಮ್ಮ ಎಲ್ಲಾ ಅನ್ವೇಷಣೆಗಳು ಹೊಸಹೊಸ ಚಿಂತನೆಗಳಿಗೆ ಕಾರಣವಾಗಿದ್ದು, ಮನೋವಿಜ್ಞಾನ ಎಂಬುದು ಎಲ್ಲಾ ಕ್ಷೇತ್ರದಲ್ಲಿಯೂ ಕಂಡುಬರುತ್ತದೆ. ಜೋಗಿಯವರು ಸಾಹಿತ್ಯಲೋಕದ ಅದ್ಭುತ ಆಕಸ್ಮಿಕಗಳನ್ನು ಅಧ್ಯಯನ ಮಾಡಿ ಇಲ್ಲಿ ದಾಖಲಿಸಿದ್ದಾರೆ. ಈ ಕೆಲಸವನ್ನು ಒಬ್ಬ ಸಾಮಾನ್ಯ ಸಾಹಿತ್ಯಾಸಕ್ತರೂ ಮಾಡಬಹುದು. ಆದರೆ ಪತ್ರಕರ್ತ, ಸಾಮಾನ್ಯ ಹಳ್ಳಿಗಾಡಿನಿಂದ ಬಂದಿರುವ ಮಾಧ್ಯಮ ಲೋಕದಲ್ಲಿ ಗುರುತಿಸಿಕೊಂಡಿರುವ ಸಮಾಜವನ್ನು ಪತ್ರಕರ್ತರಾಗಿ ನೈಜತೆ ಹಾಗು ಹತ್ತಿರದಿಂದ ಬಲ್ಲವರು ನಿರ್ವಹಿಸಿದಾಗ ಕಾಣುವ ಸತ್ಯಗಳು ಅವುಗಳ ನಿಖರತೆ ಬೇರೆಯೇ ಆಗಿರುತ್ತದೆ. ಸಾಹಿತ್ಯವು ಯಾವಾಗಲೂ ಸ್ಪಷ್ಟತೆಯನ್ನು ಬಯಸಿದರೆ, ಪತ್ರಕರ್ತರ ಬರಹಗಳು, ಇವರ ಕೃತಿಗಳನ್ನು ಸರಳವಾಗಿ ಪರಿಚಯಿಸುವ ಉದ್ದೇಶದಿಂದ ಜೋಗಿಯವರ ಕೆಲವೂಂದು ಕೃತಿಗಳಲ್ಲಿ ಮನೋವೈಜ್ಞಾನಿಕತೆಯ ಕುರಿತು ಕೆಲವೂಂದು ಮಾಹಿತಿಯನ್ನು ವಿಚಾರಗಳನ್ನು ಗಮನಿಸಬಹುದು.

ಸುಬ್ರಾಯ ಜೊಕ್ಕಾಡಿ ಅವರು "ಪುಟ್ಟಿ" ಎಂಬ ಕಾದಂಬರಿಗೆ ಮುನ್ನುಡಿ ಬರೆಯುತ್ತಾ ವಿಶಾಲವಾದ ಚಿಂತನೆಗಳ ಜೊತೆ ರೋಚಕ ಅನುಭವವನ್ನು ನೀಡುವ ಕೃತಿ ಎಂದಿದ್ದಾರೆ. "ನಾನು ಹುಡುಕ್ತಿರೋದೇ ಬೇರೆ" "ಏನದು?: "ನಂಗೊತ್ತಿಲ್ಲ." "ಗೊತ್ತಿಲ್ಲದೇ ಹುಡುಕ್ತೀಯಾ?" "ಗೊತ್ತಿಲ್ಲದಾಗ್ಗೇ ಹುಡುಕ್ತೀವೆ." ಎಲ್ಲರ ಮನಸಲ್ಲೂ ನಿರಾಕಾರವಾಗಿರೋದು ಏನೋ ಇರತ್ತೇ, ಅದಕ್ಕೆ ಆಕಾರ ಕೊಡೋದಕ್ಕೆ ನಮಗೆ ಗೊತ್ತಿರೋದಿಲ್ಲ." ಕಾದಂಬರಿಯ ನಡುವೆ ಬರುವ ಸಂಭಾಷಣೆ ಇದು. ಜೋಗಿಯ ಎಲ್ಲ ಕಾದಂಬರಿಗಳಲ್ಲೂ ಈ ಬಗೆಯ, ಮನದೊಳಗಿರುವ ಆದರೆ ಗೊತ್ತಾಗದಿರುವ ನಿರಾಕಾರವಾದ ಏನೋ ಒಂದರ ಹುಡುಕಾಟ ಇದೆ. ಈ ಕೃತಿಗಳ ನಾಯಕರು ನಿರಾಕಾರವಾದದ್ದನ್ನು ಹುಡುಕುತ್ತಾ, ಉಪನಿಷತ್ ವಾಕ್ಯದಂತೆ ನೇತಿ, ನೇತಿ, ಇದಲ್ಲ, ಇದಲ್ಲ ಎಂದು ನಿರಾಕರಿಸುತ್ತಾ ಹೋಗುವವರೇ, ಆ ಕಾರಣದಿಂದಲೇ ಅವರ ನಡವಳಿಕೆಗಳೂ ವಿಚಿತ್ರವಾಗಿ ಕಾಣಿಸುತ್ತವೆ. ಈ ಕೃತಿಯ ನಾಯಕ ಪುರುಷೋತ್ತಮನೂ ಕಮೂನ ನಾಯಕನ ರೀತಿಯ ನಿರ್ಭಾವುಕ ಮನೋಸ್ಥಿತಿಯಲ್ಲಿ ಬೆಕ್ಕಿನ ಹೆಜ್ಜೆ ಹಾಕುತ್ತಾ ಹುಡುಕುವುದನ್ನು ಚಿತ್ರಿಸುತ್ತದೆ," "ಒಬ್ಬ ಬೇರೆ ಬೇರೆ ರೀತಿಯ ಪಾತ್ರಗಳಲ್ಲಿಯೇ ಜೀವಿಸಲು ಇಷ್ಟಪಡುತ್ತಿದ್ದವನು, ನಟನೆಯನ್ನೇ ಬದುಕಾಗಿಸಿಕೊಂಡಿದ್ದವನು ತನ್ನ ನೈಜ ಪಾತ್ರವನ್ನು ಜೀವಿಸ ಹೊರಡುವ ಬದಲಾವಣೆ ಇಷ್ಟವಾಯಿತು. ರೋಚಕ ಅನುಭವವನ್ನು ನೀಡುವ ಕೃತಿ ಇದು." ಮನುಷ್ಯನ ಅಸಂಗತತೆಯ ಬದುಕು ಇವರ ಸಾಹಿತ್ಯದಲ್ಲಿ ಅಲ್ಲಲ್ಲಿ ಇಣುಕು ಹಾಕುತ್ತದೆ. ಪಿ.ಲಂಕೇಶ್ ಅವರ ಕಾದಂಬರಿಗಳಲ್ಲಿ ಬರುವ ಪಾತ್ರಗಳಂತೆ, ಚಂಪಾ ಅವರ ಸಾಹಿತ್ಯದಲ್ಲಿನ

ಪಾತ್ರಗಳಂತೆ ಅಸಂಗತ ಬದುಕಿನ ದರ್ಶನವನ್ನು ಮಾಡಿಸುತ್ತವೆ. ಇದಕ್ಕೆ ಕಾರಣ ಬಹುಶಃ ನಗರ ಬದುಕಿನ ವಾಸ್ತವತೆಯನ್ನು ಅವರು ಕಟ್ಟಿಕೊಡುತ್ತಿರುವುದರಿಂದ. ಗ್ರಾಮ ಮತ್ತು ನಗರ ಬದುಕಗಳನ್ನು ಯಾವುದೇ ಪೂರ್ವಗ್ರಹ ಮನಸ್ಸುಗಳು ಇಲ್ಲದೆ ಚಿತ್ರಿಸುತ್ತಿರುವುದರಿಂದ ಇದು ಸಾಧ್ಯವಾಗುತ್ತದೆ.

ಮನುಷ್ಯನ ಮನಸ್ಸು ಪರಿಸ್ಥಿತಿ ಮತ್ತು ಪರಿಸರಕ್ಕೆ ತಕ್ಕ ಹಾಗೆ ಬದಲಾವಣೆಯಾಗುತ್ತದೆ. ನಾನಾ ಪಾತ್ರಗಳನ್ನು ಒಬ್ಬ ಮಾನವನು ನಿರ್ವಹಿಸುತ್ತಾನೆ ಎಂಬುದನ್ನು ಮನೋವೈಚಾರಿಕತೆಯ ಹಿನ್ನೆಲೆಯಲ್ಲಿ ನೋಡಿದಾಗ ತಿಳಿಯುತ್ತದೆ. ಪುಚ್ಚೆ ಎಂದರೆ ತುಳುವಿನಲ್ಲಿ ಬೆಕ್ಕು ಎಂದರ್ಥ. ಮನಸ್ಸು ಬೆಕ್ಕಿನ ನಡೆಯಂತೆ ಚಂಚಲ ಎಂಬಂತ ಅರ್ಥಪೂರ್ಣವಾದ ಚಿಂತನೆ ಇದೆ ಇಲ್ಲಿ. ಪತ್ರಕರ್ತರಾಗಿರುವ ಜೋಗಿಯವರು ಸಮಾಜದ ನೈಜಚಿತ್ರಣದ ಜೊತೆಜೊತೆಯಲ್ಲಿ ಮನುಷ್ಯನ ಅಂತರಂಗದ ದೊಡ್ಡ ಪ್ರಪಂಚವನ್ನು ತಿಳಿಯುವಂತಹ ಪ್ರಯತ್ನವನ್ನು ತಮ್ಮ ಸಾಹಿತ್ಯ ಕೃತಿಗಳ ಮುಖಾಂತರ ತಿಳಿಯಲೆತ್ನಿಸಿದ್ದಾರೆ.

ಒಂದು ವಯಸ್ಸಿನಲ್ಲಿ ಮನಸ್ಸು ವಿಚಿತ್ರವಾದ ತಳಮಳಗಳಿಗೆ ಒಳಗಾಗುತ್ತದೆ. ಸಂಜೆ ಮಧ್ಯಾಹ್ನ ಮುಂಜಾನೆಗಳು ಭಾರವಾದಂತೆ ಅನಿಸುತ್ತದೆ. ಹೇಗೆ ಬದುಕಬೇಕು, ಇದರಿಂದ ಬಿಡುಗಡೆ ಇದೆಯಾ ಅನ್ನಿಸತೊಡಗುತ್ತದೆ. ಇವತ್ತು ನಾನು ಎಂಥಾ ಪುಸ್ತಕ ಕೊಟ್ಟರೂ ಓದಬಲ್ಲೆ ಎಂಥಾ ಕಳಪೆ ಪುಸ್ತಕದಲ್ಲೂ ನನಗೆ ಬೇಕಾದ ಒಂದು ಸಾಲು ಸಿಕ್ಕೇ ಸಿಗುತ್ತದೆ ಎಂದು ನಂಬಿದವನು, ನಾನು ಎಂಥಾ ಕಸದ ತೊಟ್ಟಿಗೆ ಎಸೆದರು ಅಲ್ಲಿಂದ ಒಂದೆರಡು ಉಪಯುಕ್ತ ವಸ್ತುಗಳನ್ನು ಎಕ್ಕಬಹುದು ಎಂಬುದು ನನ್ನ ಭರವಸೆ ಎಂಬುದು ಜೋಗಿಯವರು ಪರಿಕಲ್ಪನೆಯಾಗಿದೆ.

ಮನುಷ್ಯನಿಗೆ ಮನಸ್ಸಿಗಿಂತ ದೊಡ್ಡದು ಯಾವುದೂ ಇಲ್ಲ, ಮನಸ್ಸು ಮಾಡಿದರೆ ಎಂತಹ ಕಷ್ಟದ ಕೆಲಸವನ್ನಾದರೂ, ಅನುಪಯುಕ್ತದಲ್ಲಿ ಉಪಯುಕ್ತವಾದ ಏನನ್ನಾದರೂ ಪಡೆಯಬಹುದು ಎಂಬುದು ಇವರ ಕೃತಿಗಳಲ್ಲಿ ಸಿಗುವ ಆಶಯವಾಗಿದೆ. ಎಲ್ಲವನ್ನೂ ಎಲ್ಲರನ್ನೂ ಸರ್ವನಾಶ ಮಾಡುವುದೇ ನಿಯಮ. ಹೀಗಾಗಿ ಬೆಳೆಯಬೇಕು ಬದಲಾಗಬೇಕು ಅನ್ನುವವರು ಕಲಿಯಬೇಕಾದ ಮೊದಲು ಪಾಠ ಬ್ರೇಕ್ ದಿ ರೂಲ್, ನೇಮವನ್ನು ಮುರಿ. ಹಾಗೆ ಮುರಿಯುವ ಮೂಲಕ ಮಾತ್ರ ಅರಿಯುವುದಕ್ಕೆ ಸಾಧ್ಯ ಅಂದರೆ ಮುರಿಯುವುದೇ ಹೊರತು ಪಾಲಿಸುವುದು ಅಲ್ಲ. ಕೆಲವೊಂದು ವಿಚಾರಗಳು ಸನ್ನಿವೇಶಕ್ಕೆ ತಕ್ಕ ಹಾಗೆ ಬದಲಾವಣೆಗೊಳ್ಳುತ್ತಿರುತ್ತದೆ. ಇಲ್ಲಿ ಮನೋವೈಜ್ಞಾನಿಕ ಚಿಂತನೆ ಬಹಳ ಮುಖ್ಯ ಪಾತ್ರವಹಿಸುತ್ತದೆ. ನಮ್ಮೊಳಗಿರುವ ಪ್ರತಿಭೆಯನ್ನು ನಾವು ಒತ್ತಾಯಪೂರ್ವಕವಾಗಿ ಮರೆತು ನಮಗೆ ಒದಗಿ ಬಂದಿಲ್ಲದ ಇನ್ನೇನನ್ನು ಕಲಿಯುವುದು, ತುಂಬಾ ಚೆನ್ನಾಗಿ ಚಿತ್ರ ಬರೆಯುವವರು. ಚಿತ್ರ ಬರೆಯಬೇಕು ಎನ್ನುವ ಆಸೆಯನ್ನು ಬಿಟ್ಟು, ಗಾಯಕನಾಗಲು ಹೊರಡುವುದು, ವೇಗವಾಗಿ ಈಜಬಲ್ಲವನು ತನ್ನ ಕಾಲುಗಳನ್ನು ತಾನೇ ಕಟ್ಟಿಹಾಕಿಕೊಂಡು ಜಿಗಿಯಲು ಹವಣಿಸುವುದು, ಗಣಿತದ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಬಲ್ಲವರು ಕಾವ್ಯ ಬರೆಯಲು ಹೊರಡುವಂತೆ ಮಾಡುವುದೇ ನಮ್ಮ ವಿದ್ಯೆ ವಿದ್ಯಾಭ್ಯಾಸ. ಇಂತಹ ವಿಚಾರಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸದೇ ಅವರನ್ನು ಬೇರೆ ದಾರಿಗೆಳೆಯುವುದು ಇಂತಹ ವಿಚಾರಗಳನ್ನು ಮನೋವಿಜ್ಞಾನದ ಮುಖಾಂತರ ಗುರುತಿಸಬಹುದು ಎಂಬಂತಹ ಅಂಶಗಳನ್ನು ಜೋಗಿಯವರು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ.

ನೀನು ಬುದ್ದಿವಂತನಾದರೆ ವಿದ್ಯೆಬೇಕಾಗಿಲ್ಲ. ದಡ್ಡನಾಗಿದ್ದರೆ ವಿದ್ಯೇನೇ ಕಲಿಯಬೇಕು. ನೀನು ಸಾಹಸಿಯಾಗಿದ್ದರೆ ಏನನ್ನು ಕಲಿಯಬೇಕಾಗಿಲ್ಲ. ಆಸಕ್ತನಾಗಿದ್ದರೆ ವಿದ್ಯೆಯನ್ನು ನಿನಗೆ ಜೀವನವೇ ಕಲಿಸುತ್ತದೆ ನೀನು ಹೇಡಿಯಾಗಿದ್ದರೆ ವಿದ್ಯೆ ಕಲಿತರೆ ಮಾತ್ರ ಜೀವನ ನಡೆಸುವುದಕ್ಕೆ ಸಾಧ್ಯ. ನೀನು ಪ್ರಕೃತಿಯ ಹಾಗೆ ಬದುಕಬಲ್ಲೆಯಾದರೆ ಈ ಜಗತ್ತೇ

ನಿನ್ನ ಪಾಠಶಾಲೆ. ನಿನ್ನ ಪ್ರಕೃತಿಯೇ ನಿನಗೆ ಗೊತ್ತಿಲ್ಲದೆ ಹೋದರೆ ಸ್ಕೂಲುಗಳೇ ನಿನಗೆ ಆಶ್ರಮ ತಾಣ. ಜೋಗಿಯವರ ಅರ್ಥಗ್ರಹಿಕೆಯಲ್ಲಿ ನಾವು ಕಂಡಂತಹ ವಿಚಾರಧಾರೆಗಳು ತುಂಬಾ ಅರ್ಥಪೂರ್ಣವಾಗಿದೆ. ನಮ್ಮ ಪ್ರಕೃತಿ ನಮಗೆ ಎಲ್ಲವನ್ನೂ ನೀಡುತ್ತದೆ ಆದರೆ ನಾವು ಅದನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವ ಮನಸ್ಸಿನ ಸ್ಥಿತಿ, ಮನೋಭಾವವನ್ನು ತಾಳಿದಾಗ ಮಾತ್ರ ಪ್ರಕೃತಿಯನ್ನು ಗ್ರಹಿಸುವ ಜಾಣ್ಮೆ ನಮ್ಮಲ್ಲಿರಬೇಕು. ಪ್ರತಿಭೆ ಮತ್ತು ಕಲಿಕೆಯ ನಡುವಿನ ವ್ಯತ್ಯಾಸ ಏನು? ಹೇಗೆ? ಅಡುಗೆ ಮಾಡಬೇಕು ಅನ್ನುವುದನ್ನು ಕಲಿಸುವುದು ಕಲಿಕೆ, ಮಾಡಿದ ಅಡುಗೆ ಒಳಗೆ ರುಚಿಯನ್ನು ಹೇಗೆ ಹಾಕಬೇಕು ಅನ್ನುವುದನ್ನು ಕಲಿಸುವುದು ಪ್ರತಿಬಿಂಬ ಉತ್ತರ ಬಂದಂತೆ.

ಆ ಕ್ಷಣ ನನಗೆ ನನ್ನ ಕಷ್ಟಗಳೆಲ್ಲ ಪುಟ್ಟದಾಗಿ ಕಂಡವು ಕಷ್ಟಗಳು ನೋಡುವುದಕ್ಕೆ ಮಾತ್ರ ಬೆಟ್ಟದಂತೆ ಕಾಣುತ್ತವೆ ನಿವಾರಿಸಿಕೊಂಡು ಅವುಗಳನ್ನು ಹತ್ತಿ ತಲುಪಿದರೆ ಕಷ್ಟವೇ ಇರುವುದಿಲ್ಲ, ಬೆಟ್ಟವನ್ನು ಕಷ್ಟವನ್ನು ನೋಡುತ್ತಾ ಕೂರಬಾರದು ಹಿಮ್ಮೆಟ್ಟಿಸಬೇಕು. ನಿಧಾನವೋ ಬೇಗವೋ ಬೆಟ್ಟ ಹತ್ತಬೇಕು ಅದೊಂದೇ ದಾರಿ. ಮನಸ್ಸು ಕಷ್ಟಗಳು ಬಂದಾಗ ದೃಢವಾದ ನಿರ್ಧಾರವನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ಮನುಷ್ಯ ಸಹಜ ಸ್ಥಿತಿಯಲ್ಲಿ ಜೀವಿಸುತ್ತಿದ್ದಾನೆ ಎಂದರ್ಥ. ಅದು ನೇರಗೆರೆ ಬಂದರೆ ಮನುಷ್ಯ ಹೇಗೆ ಸತ್ತಂತೆಯೋ, ಹಾಗೆಯೇ ಜೀವನದಲ್ಲಿಯೂ ಏರಿತಗಳಿದ್ದರೆ ಜೀವನವೆಂಬುದು ಸಾರ್ಥಕವಾಗುತ್ತದೆ ಎಂಬುದನ್ನು ಜೋಗಿಯವರು ಇಂತಹ ವಿಚಾರಗಳನ್ನು ಮನೋವೈಜ್ಞಾನಿಕತೆಗೆ ಸಂಬಂಧಿಸಿದಂತೆ ಹಲವಾರು ಕೃತಿಗಳಲ್ಲಿ ಚರ್ಚಿಸಿದ್ದಾರೆ.

ಬೆಳಕಿಲ್ಲದ ದಾರಿ ಕಾಣುವುದಿಲ್ಲ. ಬೆಳಕು ಜಾಸ್ತಿಯಾದರೂ ದಾರಿ ಕಾಣುವುದಿಲ್ಲ, ಹೌದು ಬೆಳಕು ಎಷ್ಟು ಬೇಕು ಅಷ್ಟೇ ಇರಬೇಕು. ಯಾವ ದಿಕ್ಕಿನಿಂದ ಬೆಳಕು ಬೀಳಬೇಕು ಅದೇ ದಿಕ್ಕಿನಿಂದಲೇ ಬಿಡಬೇಕು. ವಿರುದ್ಧ ದಿಕ್ಕಿನಿಂದ ಬೇಳಕು ಬಿದ್ದರೆ ಜಗತ್ತೇ ಕತ್ತಲಾಗುತ್ತದೆ. ಎಷ್ಟೋ ಸಲ ನಾವು ಬೆಳಕಿಗೆ ಎದುರಾಗಿ ನಿಂತು ಜಗತ್ತನ್ನು ನೋಡಲು ಯತ್ನಿಸುತ್ತೇವೆ, ಆಗ ಕಣ್ಣಿಗೇನು ಕಾಣಿಸುವುದೇ ಇಲ್ಲ. ಇಂತಹ ಹೊತ್ತಲ್ಲೇ ನಾವು ಧರ್ಮ ಜಾತಿ ಅಂತಸ್ತು ಮತ್ತು ಅಹಂಕಾರದ ಮಾತನಾಡುತ್ತೇವೆ ಹಿಂದುಗಡೆಯಿಂದ ಬಿದ್ದಾಗ ಇವೆಲ್ಲವೂ ದಾರಿ ತರುವ ಬೆಳಕು. ನಮ್ಮಲ್ಲಿ ಅನೇಕ ಪ್ರಶ್ನೆಗಳಿರುತ್ತವೆ, ಅವನ್ನು ನಾವು ಕೇಳುತ್ತಲೇ ಹೋಗುತ್ತೇವೆ ಆ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತೇವೆ ಎಷ್ಟೋ ಸಲ ಎಷ್ಟೋ ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ, ಒಂದು ವೇಳೆ ಉತ್ತರ ಸಿಕ್ಕರು ಅವು ನಮಗೆ ಬೇಕಾದ ಉತ್ತರಗಳು ಆಗುವುದಿಲ್ಲ. ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇರುತ್ತದೆ. ಕೆಲವೊಂದು ಸಮಸ್ಯೆಗಳಿಗೆ ಪ್ರಕೃತಿಯು ತನ್ನೊಳಗೆ ಪರಿಹಾರಗಳನ್ನು ತುಂಬಿಕೊಂಡಿರುತ್ತದೆ, ಅದನ್ನು ಅರಿಯುವ ಮನೋಭಾವ ಮಾನವನ ಮನಸ್ಸಿನಲ್ಲಿ ಮೂಡಬೇಕು. ಆಲೋಚನಾ ಕ್ರಮದಲ್ಲಿ ಬದಲಾವಣೆಯಗಬೇಕು ಇಂತಹ ಅಂಶಗಳನ್ನು ಮನೋವೈಜ್ಞಾನಿಕತೆಯಿಂದ ತಿಳಿಯಬೇಕಾಗುತ್ತದೆ.

ಈ ಸ್ವರೂಪದ ವಿಭಿನ್ನ ಅಂಶಗಳು ಜೋಗಿಯವರ ಸಾಹಿತ್ಯ ಕೃತಿಗಳಲ್ಲಿ ಓದಿಸಿಕೊಳ್ಳುತ್ತವೆ. ಇಂತಹ ಆಕಸ್ಮಿಕಗಳನ್ನು ಸಾಮಾನ್ಯ ಓದುಗರಾದ ನಾವು ಚರ್ಚಿಸಿದರೆ ಹೇಗೆ ಎಂಬುದನ್ನು ಜೋಗಿಯವರ ಕೆಲವೊಂದು ಕೃತಿಗಳಲ್ಲಿರುವ ಲೇಖನಗಳನ್ನು ಅಧ್ಯಯನ ಮಡುವ ಮೂಲಕ ಗ್ರಹಿಸೋಣ.

‘ಸಹಜ ಖುಷಿ’ ಕೃತಿಯಲ್ಲಿ ಜೋಗಿಯವರು ಹೇಳಿರುವಂತೆ ನಮ್ಮ ನಮ್ಮ ಸಹಜ ಖುಷಿಗಳನ್ನು ಮರೆತೇಬಿಟ್ಟಿದ್ದೇವೆ, ಹೇಗೆಂದರೆ ಸಹಜ ಖುಷಿಯ ಹುಡುಕಾಟದಲ್ಲಿರುವಾಗ ಬರೆದಿರುವ ಲೇಖನಗಳ ಸಂಗ್ರಹ ಈ ಕೃತಿಯಾಗಿದ್ದು. ನಮ್ಮ ನಮ್ಮ ಆರೋಗ್ಯ, ರುಚಿ, ಸಂತೋಷಗಳನ್ನು ಮತ್ಯಾವುದೂ ಕೂಡ ಪ್ರಭಾವಿಸಕೂಡದು ನಮ್ಮ ಓದು, ಆಹಾರ, ನೋಟಗಳನ್ನು ನಾವೇ ತೀರ್ಮಾನಿಸಿ ಅದಷ್ಟರಲ್ಲೇ

ಬದುಕುತ್ತಿರಬೇಕು. ನಮ್ಮ ಮನಸ್ಥಿತಿಗಳನ್ನು ನವು ಎಷ್ಟರ ಮಟ್ಟಿಗೆ ಬದಲಾಯಿಸಿಕೊಂಡಿದ್ದೇವೆಯೆಂದರೆ ಈ ಕೃತಿಯನ್ನು ಓದಿದಾಗ ಅರಿವಿಗೆ ಬರುವ ಒಂದು ಅಂಶ, ಹಳೆಯಕಾಲದ ಮದುವೆಗಳು ಎಷ್ಟು ಮುಖ್ಯವಾಗಿದ್ದವು ಹಾಗೂ ಹಿಂದೆ ಮದುವೆಯೆಂದರೆ ಸುಧೀರ್ಘ ಸಂಭ್ರಮ, ಅಲ್ಲೊಂದು ಪುಟ್ಟ ಜಗತ್ತು ತೆರೆದುಕೊಳ್ಳುತ್ತಿತ್ತು. ಒಬ್ಬ ಹುಡುಗನನ್ನು ನೋಡಿದ ತಕ್ಷಣ ಎಲ್ಲ ವಿವರಗಳೂ ಗೂಗಲ್‌ಗಿಂತ ವೇಗವಾಗಿ ಮತ್ತು ವಿವರವಾಗಿ ಕೈವಶವಾಗುತ್ತಿದ್ದವು. ಮನಸ್ಸುಗಳನ್ನು ಅರಿಯುವ ಪ್ರಯತ್ನ ಹಿಂದಿನವರು ಮಾಡುತ್ತಿದ್ದರೆ, ಇಂದು ಶ್ರೀಮಂತಿಕೆಯ ಮೇಲೆ ನಿಂತಿದೆ ಮದುವೆ ಶಿಷ್ಟಾಚಾರ ಆಗಿದೆ, ಸಂಸಾರ ಕೂಡ ಶಿಷ್ಟಾಚಾರ ಆಗಿದೆಯೋ? ಎಂಬ ಪ್ರಶ್ನೆ ಉದ್ಭವವಾಗುತ್ತದೆ, ಎಂಬುದನ್ನು ಜೋಗಿಯವರ ಕೃತಿಯಲ್ಲಿ ಗ್ರಹಿಸಬಹುದು.

"ಎಂಥಾ ಸಾವು ಮಾರಾಯ!" ಲೇಖನದಲ್ಲಿ ಬದುಕು ಮತ್ತು ಸಾವಿನ ವಿಚಾರದಲ್ಲಿ ಮನೋವೈಜ್ಞಾನಿಕತೆ ಚಿಂತಿಸುವ ವ್ಯಕ್ತಿಯಲ್ಲಿ ಯಾವ ರೀತಿ ಪರಿಣಾಮಕಾರಿಯಾಗಿಸುತ್ತದೆ ಎಂದರೆ ಬದುಕು ಮತ್ತು ಸಾವು ಸಂಧಿಸುವ ಜಾಗ ಅನ್ನುವುದೇ ಇಲ್ಲ, ಸತ್ತ ನಂತರ ಏನಾಗುತ್ತೇವೆ ಅನ್ನುವುದು ನಮಗೆ ಯಾಕಾದರೂ ಬೇಕು, ಬದುಕು ಒಂದು ಅಚ್ಚರಿಯಲ್ಲವೇ." ತಮ್ಮ ಸುತ್ತಮುತ್ತಲ ಮಂದಿ ಸಾಯುತ್ತಿರುವುದನ್ನೂ ದಿನನಿತ್ಯ ಕಾಣುತ್ತಲೇ ಇದ್ದರೂ ತನಗೆ ಸಾವಿಲ್ಲ ಎಂಬಂತೆ ಮನುಷ್ಯ ಬದುಕುತ್ತಾನಲ್ಲ, ಅದೇ ನನ್ನನ್ನು ಅತ್ಯಂತ ಅಚ್ಚರಿಗೊಳಿಸುತ್ತದೆ."[3]

"ಫ್ರಾನ್ಸಿಸ್ ಬೇಕನ್‌ನಂಥ ಪ್ರಬಂಧಕಾರರು ಸಾವನ್ನು ಅತೀ ಕಡಿಮೆ ತೊಂದರೆ ಮಾಡುವ ಕೇಡು ಎಂದರೆ, ಇ.ಎಂ.ಫಾರ್ಸ್ಟರ್ ಸಾವು ಮನುಷ್ಯನನ್ನು ನಾಶ ಮಾಡುತ್ತದೆ. ಆದರೆ ಸಾವಿನ ಕುರಿತ ಚಿಂತನೆ ಅವನನ್ನು ಅಮರನನ್ನಾಗಿಸುತ್ತದೆ."–ಜೋಗಿ. ಜೋಗಿಯವರ ಚಿಂತನೆಗಳನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಿದಾಗ ಹುಟ್ಟುಸಾವಿನಲ್ಲೂ ಮನುಷ್ಯ ಅಮರನಾಗಬೇಕಾದರೆ ಅವನ ಮನೋಸ್ಥೈರ್ಯ, ನಂಬಿಕೆ, ಅವನು ಚಿಂತಿಸುವ ಕ್ರಮ ತುಂಬಾ ಮುಖ್ಯವಾಗುತ್ತದೆ ಎಂಬುದನ್ನು ಜೋಗಿಯವರ ಈ ಕೃತಿಯಲ್ಲಿ ಗ್ರಹಿಸಬಹುದಾಗಿದೆ.

'ರಾಯ ಭಾಗದ ರಹಸ್ಯ ರಾತ್ರಿ' ಎಂಬ ಜೋಗಿಯವರ ಕಥೆಗಳಲ್ಲಿ ದೆವ್ವ, ಪಿಶಾಚಿಗಳ ಚಿತ್ರಣವನ್ನು ತಂದಿದ್ದಾರೆ. ಜೋಗಿಯವರು ಇಷ್ಟಪಟ್ಟು ಬರೆದ ಆರೇಳು ದೆವ್ವದ ಕಥೆಗಳಿಗೆ ಒಂದೆರಡು ಬೇಟಿಯ ಕಥೆಗಳಿವೆ. ಗುರುವಾಯನಕೆರೆಯ ಚಿತ್ರಗಳಿದೆ ಯಾವತ್ತೋ ಕಡಿದ ಮರದ ಬೋಟು ಬೊಡ್ಡೆ, ರಾತ್ರಿ ಸಮಯದಲ್ಲಿ ಅದು ದೆವ್ವದ ರೀತಿ ಕಂಡಂತೆ ಮನದಲ್ಲಿ ಅದೇ ಕಲ್ಪನೆಗಳನ್ನು ಇಟ್ಟುಕೊಂಡರೆ ನಾವು ನೋಡುವಂತಹ ಕೆಲವೊಂದು ದೃಶ್ಯಗಳು ನಮ್ಮ ಕಲ್ಪನೆಗೆ ಸರಿದೊಗಿಸುತ್ತವೆ ಮನಸ್ಸಿನ ಭಾವನೆಗೆ ತಕ್ಕಂತ ನೋಟ ಎಂಬುದನ್ನು ಜೋಗಿಯವರ ಕೃತಿಗಳಲ್ಲಿ ಗಮನಿಸಬಹುದಾಗಿದೆ.

'ನದಿಯ ನೆನಪಿನ ಹಂಗು' ಜೋಗಿಯವರ ಮತ್ತೊಂದು ಕೃತಿಯಲ್ಲಿ ಮನೋವೈಜ್ಞಾನಿಕತೆಯನ್ನು ಕಾಣಬಹುದು. ಈ ಕಾದಂಬರಿಯಲ್ಲಿ ಲೇಖಕರು ಹೇಳುವಂತೆ ಕಥೆ, ಕಾದಂಬರಿಯ ಕರ್ತೃ ಎಲ್ಲವನ್ನೂ ಔದಾರ್ಯದಿಂದ ಹಾಗೂ ಅನುಮಾನದಿಂದ ನೋಡಬೇಕಾಗುತ್ತದೆ. ಚಂಚಲತೆಯ ಜೊತೆಗೆ ತನ್ಮಯತೆಯನ್ನೂ ಗಳಿಸಿಕೊಳ್ಳಬೇಕಾಗುತ್ತದೆ. ನದಿಗೆ ನೆನಪುಗಳಿರುವುದಿಲ್ಲ ಅದು ಎಲ್ಲವನ್ನೂ ತೊಳೆಯುತ್ತಾ ಸಾಗುತ್ತದೆ. ಆದರೆ ನದಿಯ ನೆನಪಿನ ಹಂಗಿನಿಂದ ನಾವ್ಯಾರೂ ಪಾರಾಗಲು ಸಾಧ್ಯವಿಲ್ಲ, ಇದ್ದ ನದಿಗಿಂತ ಗಾಢವಾಗಿ, ಇರದ ನದಿ ಕಾಡುತ್ತದೆ, ನೋಡಿದ ಮುಖಕ್ಕಿಂತ ತೀವ್ರವಾಗಿ ನೋಡದ ಮುಖ ಕಾಡುವ ಹಾಗೆ, ಈ ಕೃತಿಯಲ್ಲಿ ಜೋಗಿಯರು ಅವರೂರಿನ ಕತೆಯನ್ನು ಬರೆಯುತ್ತಾ ಬರೆಯುತ್ತಾ ಅಷ್ಟೂದಿನಗಳ ಕಾಲ ಲೇಖಕರು ಅವರೂರಿನಲ್ಲೇ ಜೀವಿಸಿದಂತೆ ಭಾವಿಸಿಕೊಂಡು ಕಾದಂಬರಿ ರಚಿಸಿದ್ದಾರೆ. ಇಲ್ಲಿ ಮನೋವೈಜ್ಞಾನಿಕತೆಗೆ ಕೆಲವೊಂದು ಬಾರಿ ಅನುಭವ, ಪರಿಸರದ ಅವಶ್ಯಕತೆ ಇದೆ. ಹಿಂದಿನ ನೆನಪುಗಳ ಸಂಗ್ರಹ ಮನದಲ್ಲಿ

ಮೂಡಬೇಕು. ಅದರ ಚಿತ್ರಣವನ್ನು ಈ ಕೃತಿಯಲ್ಲಿ ಕಾಣಬಹುದು.

'ಚಿಟ್ಟೆ ಹೆಜ್ಜೆ ಜಾಡು' ಕಾದಂಬರಿ ಜೋಗಿಯವರು ಕಾಡಿನ ಪರಿಚಯದ ಜೊತೆಗೆ ಕಾಲಕಾಲಕ್ಕೆ ಮನೋಭಾವ, ಚಿಂತನೆ ಯಾವ ರೀತಿಯಲ್ಲಿ ಬದಲಾಗುತ್ತಾ ಸಾಗುತ್ತದೆ ಹಾಗೂ ಸಾಹಿತ್ಯದಲ್ಲಿ ಬರೆಯುವವರ ಯೋಚನಾ ಕ್ರಮಗಳು ಬದಲಾಗಿದೆ, ಕಥೆ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಕಾಡು ಕಾಲಕಾಲಕ್ಕೆ ಬದಲಾಗುತ್ತಾ ಸಾಗಿದೆ. ಕಾನೂನು ಹೆಗ್ಗಡಿತಿಯ ಕಾಡಲ್ಲಿ ಬೇಟೆ ಒಂದು ಸಂಭ್ರಮ, ಕಾರಂತರ ನಾಯಕನಿಗೆ ಕಾಡು ಕಡಿದು ಹೊಲಗದ್ದೆ ಮಾಡುವುದು ವ್ಯಕ್ತಿಯ ಸಾಧನೆ, ಛಲದ ಪ್ರತೀಕ, ತೇಜಸ್ವಿಯವರಿಗೆ ಕಾಡಿನ ನಿಗೂಢಗಳ ಕುರಿತು ಅತೀವ ಬೆರಗು, ಆದರೆ ಇಂದು ಶಿಕಾರಿ ನಿಷಿದ್ಧ, ಕಾಡನ್ನು ಕಡಿದು ಹೊಲ ಮಾಡುವುದು ಪರಿಸರ ವಿರೋಧಿ ನಿಲುವು. ನಿಗೂಢತೆಯನ್ನಷ್ಟೆ ಕಾಡು ಉಳಿಸಿಕೊಂಡಿದೆ. ಅಭಿವೃದ್ಧಿ ಯೋಜನೆಗಳ ತೆಕ್ಕೆಯಿಂದ ಕಾಡನ್ನು ಹೇಗೆ ಪಾರುಮಾಡಬೇಕು ಎನ್ನುವುದು ಇಂದಿನ ಚಿಂತನಶೀಲತೆಯಾಗಿದೆ. ಹೀಗೆ ಬದಲಾಗುತ್ತಿರುವ ಕಾಡಿನ ಕುರಿತು ಗ್ರಹಿಕೆಯ ಹಿನ್ನೆಲೆಯಲ್ಲಿ ಈ ಕಾದಂಬರಿಯನ್ನು ಜೋಗಿಯವರು ಬರೆದಿದ್ದಾರೆ. ಇವರ ಚಿಂತನಾಶೀಲತೆ ಇವರ ಮನೋವೈಚಾರಿಕತೆ ಹಾಗೂ ವಿಶ್ಲೇಷಣೆ ಅನ್ವೇಷಣೆಯ ಬಗ್ಗೆ ಗ್ರಹಿಸಬಹುದು ಈ ಕೃತಿಯಲ್ಲಿ ಕಾಣಬಹುದಾಗಿದೆ.

ಜೋಗಿಯವರ ಕೆಲವೊಂದು ಕೃತಿಗಳನ್ನು ನಮ್ಮ ಓದಿಗೆ ತೆಗೆದುಕೊಂಡಾಗ ಕಾಣಿಸುವ ಸ್ವರೂಪ ಹೀಗಿದೆ. ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಕೃತಿಗಳನ್ನು ಗಮನಿಸಿದಾಗ ಕೃತಿಕಾರರ ಚಿಂತನಾಶೀಲತೆ, ಸಾಹಿತ್ಯವನ್ನು ವೈಚಾರಿಕವಾಗಿ ಸೂಕ್ಷ್ಮವಾಗಿ ಗಮನಿಸಿದಾಗ ಸಮಾಜದ ಒಳನೋಟ, ಸತ್ಯದ ಅರಿವು, ಮಾನವನಲ್ಲಿ ನಡೆಯುವಂತಹ ಮಾನಸಿಕ ಘರ್ಷಣೆಗಳು, ಚಂಚಲತೆ, ಸೂಕ್ಷ್ಮಗ್ರಹಿಕೆ, ಮನೋಭಾವ, ಕಲ್ಪನಾಶಕ್ತಿ, ಅನುಭವ, ಮನೋಸ್ಥೈರ್ಯ, ಚಂಚಲತೆ, ಪ್ರಕೃತಿ ನಡುವಿನ ಸಂಬಂಧ ಎಲ್ಲಾ ಅಂಶಗಳು ಮುಖ್ಯವಾಗಿದೆ. ಮನುಕುಲವನ್ನು ಕಾಲಕಾಲಕ್ಕೆ ಬದಲಾಯಿಸುತ್ತಿರುವ ಪರಿಸರ, ಪ್ರಕೃತಿ ಅವನ ಚಿಂತನೆಗಳನ್ನು ಬದಲಾಯಿಸುತ್ತಾ ಬಂದಿದೆ. ಆಧುನಿಕತೆ, ನಗರೀಕರಣ ಮಾನವನ ದೀರ್ಘಚಿಂತನೆಗಳಿಂದ ನಿರ್ಮಾಣವಾಗುತ್ತಾ ಬೃಹದಾಕಾರವಾಗಿ ಬೆಳೆಯುತ್ತಿದ್ದು, ಪ್ರಕೃತಿಯ ವಿಕೋಪಕ್ಕೆ ಆಧುನೀಕತೆ ಹಾಗೂ ನಗರೀಕರಣಗಳೂ ಮುಖ್ಯ ಕಾರಣವೆಂದರೆ ತಪ್ಪಾಗಲಾರದು. ಇಂತಹ ವಿಕೋಪಗಳನ್ನು ಮೆಟ್ಟಿನಿಲ್ಲಲು ನಡೆದಿರುವ ಪ್ರಯತ್ನಗಳು, ಆಲೋಚನೆಗಳು ಒಳ್ಳೆಯ ಫಲಿತಾಂಶ ಬೀರಿದ ಘಟನೆಗಳು ಬೆಳವಣಿಗೆಗಳು ಇವೆಲ್ಲವನ್ನು ಜೋಗಿಯವರ ತಮ್ಮ ಕೃತಿಗಳಲ್ಲಿ ಮನೋವೈಜ್ಞಾನಿಕತೆಯ ಹಿನ್ನೆಲೆಯಲ್ಲಿ ನೋಡಲೇಬೇಕಾಗುತ್ತದೆ. ಆಗ ಅವರ ಸಾಹಿತ್ಯಿಕ ಭಾಷೆಗೆ ಹೊಸ ಅರ್ಥ ಪ್ರಾಪ್ತವಾಗುತ್ತದೆ.

**ಕೊನೆಟಿಪ್ಪಣಿಗಳು**

1. ಜೋಗಿ. (2017). *ಚಿಕ್ಕಪ್ಪ.* ಪು.10
2. ಅದೇ. ಪು.131
3. ಜೋಗಿ. (2023). *ಸಹಜ ಋಷಿ.* ಪು.17

**ಪರಾಮರ್ಶನ ಗ್ರಂಥಗಳು**


- ಜೋಗಿ. (2017). *ಚಿಕ್ಕಪ್ಪ.* ಅಂಕಿತಪುಸ್ತಕ.
- ಜೋಗಿ. (2016). *ಚಿಟ್ಟೆ ಹೆಜ್ಜೆ ಜಾಡು.* ಅಂಕಿತ ಪುಸ್ತಕ.
- ಜೋಗಿ. (2011). *ನದಿಯ ನೆನಪಿನ ಹಂಗು.* ಅಂಕಿತ ಪುಸ್ತಕ.
- ಜೋಗಿ. (2020). *ಪುಚ್ಚೆ.* ಅಂಕಿತ ಪುಸ್ತಕ.
- ಜೋಗಿ. (2023). *ರಾಯಭಾಗದ ರಹಸ್ಯ ರಾತ್ರಿ.* ಅಂಕಿತ ಪುಸ್ತಕ.
- ಜೋಗಿ. (2023). *ಪ್ರೀತಿಸುವವರನ್ನು ಕೊಂದುಬಿಡಿ.* ಸಾವಣ್ಣ ಎಂಟರ್ ಪ್ರೈಸಸ್.
- ಜೋಗಿ. (2023). *ಸಹಜ ಋಷಿ.* ಸ್ವಪ್ನ ಬುಕ್ ಹೌಸ್, ಬೆಂಗಳೂರು